VK P38 15/7/2021

# ಸೇನೆಗೆ ಕೃತಿಕಾ ದೇವಯ್ಯ ಆಯ್ಕೆ



**ನಾಪೋಕ್ಲು (ಕೊಡಗು):** ಮಡಿಕೇರಿ ತಾಲೂಕು ಕಕ್ಕಬೆ ಗ್ರಾಮದ ಅರೆಯಡ ಕೃತಿಕಾ ದೇವಯ್ಯ ಇತ್ತೀಚೆಗೆ ನಡೆದ 'ಆಲ್ ಇಂಡಿಯಾ ಕಮಿಷನ್ಡ್' ಸೇನಾಧಿಕಾರಿಗಳ ಪರೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನ ಪಡೆದು ಭಾರತೀಯ ಸೇನೆಗೆ ಆಯ್ಕೆಯಾಗಿದ್ದಾರೆ.

ಇವರು ಅರೆಯಡ ಜೀವನ್ ಮತ್ತು ಬಬಿತ ದಂಪತಿಯ ಪುತ್ರಿ. 2018ರಲ್ಲಿ ದಿಲ್ಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಕರ್ನಾಟಕ -ಗೋವಾ ಡೈರೆಕ್ಟರೇಟ್‌ನಿಂದ ಎನ್‌ಸಿಸಿ ಸೀನಿಯರ್ ವಿಭಾಗದಲ್ಲಿ ಪಾಲ್ಗೊಂಡು ಬೆಸ್ಟ್ ಕೆಡೆಟ್ ಆಗಿ ಹೊರಹೊಮ್ಮಿದ್ದರು. ಬೆಂಗಳೂರಿನ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಕೃತಿಕಾ, ನಾಪೋಕ್ಲುವಿನ ಶ್ರೀರಾಮ ಟ್ರಸ್ಟ್ ಶಾಲೆಯ ಹಳೆಯ ವಿದ್ಯಾರ್ಥಿನಿ.